ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪೈಕಿ 51 ಪ್ರಶ್ನೆಗಳ ಪೈಕಿ 33 ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತು 4ನೇ ಮೇ 1998ರ 22ನೇ ಪಟ್ಟಿಯಲ್ಲಿ ಚುಕ್ಕೆ ಗುರುತಿನ 15 ಪ್ರಶ್ನೆಗಳ ಪೈಕಿ, 3 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ, 83 ಪ್ರಶ್ನೆಗಳ ಪೈಕಿ 29 ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತ 5ನೇ ಮೇ, 1998ರ ದಿನಾಂಕದ 23ನೇ ಪಟ್ಟಿಯಲ್ಲಿನ ಚುಕ್ಕೆ ಗುರುತಿನ 15 ಪ್ರಶ್ನೆಗಳ ಪೈಕಿ 2 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 117 ಪ್ರಶ್ನೆ ಪೈಕಿ 10 ಪ್ರಶ್ನೆಗಳಿಗೆ ಉತ್ತರಗಳನ್ನು ತಮ್ಮ ಪರವಾನಿಗೆ ಪಡೆದು ಸಭೆಯ ಮುಂದೆ ಮಂಡಿಸುತ್ತೇನೆ.

ದಿನಾಂಕ 6.5.1998 ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು.

ಪತಿ - ಪತ್ನಿ ಶಿಕ್ಷಕರ ವರ್ಗಾವಣೆ.

1535 - ಶ್ರೀ ಅಶ್ವತ್ಥನಾರಾಯಣ ರೆಡ್ಡಿ (ವರ್ತೂರು) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶಿಕ್ಷಕರ ವರ್ಗಾವಣೆಯಲ್ಲಿ ಅಂತರ ಜಿಲ್ಲಾ ವರ್ಗಾವಣೆಯನ್ನು ಮಾಡದೆ ನಿಯಮಾವಳಿಗಳಿಂದ ಬಹಳಷ್ಟು ಶಿಕ್ಷಕರ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಒಂದೇ ಕುಟುಂಬದ ದಂಪತಿಗಳು ಶಿಕ್ಷಕರಾಗಿದ್ದು ಅಥವಾ ಬೇರೆ ಬೇರೆ ಇಲಾಖೆಗಳಲ್ಲಿ ನೌಕರಿಯಲ್ಲಿದ್ದು, ದೂರದಲ್ಲಿರುವಾಗ ಇಂತಹ ಪರಿಸ್ಥಿತಿಯನ್ನು ವಿಶೇಷವಾಗಿ ನಿಯಮಾವಳಿಗಳನ್ನು ಸಡಿಲಿಸುವುದು ಸೂಕ್ತವಲ್ಲವೆ?*

ಇ) *ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ನಿಯಮಾವಳಿಗಳನ್ನು ಬದಲಾಯಿಸಲು ಕ್ರಮ ಕೈಗೊಳ್ಳಲಾಗುವುದೆ?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಹಾಲಿ ಇರುವ ಮಾರ್ಗಸೂಚಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ನೇತ್ರ ಚಿಕಿತ್ಸೆ ಮಾಡಿದ ವೈದ್ಯರಿಗೆ ಅನುದಾನ.

1536 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಆರೋಗ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಕಣ್ಣಿನ ಆಸ್ಪತ್ರೆಗಳೆಷ್ಟು? (ಕಣ್ಣಿನ ಕೇಂದ್ರಗಳು) ನೇತ್ರ ಚಿಕಿತ್ಸಾಲಯಗಳೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)*

ಅ) ಗ್ರಾಮೀಣ ಪ್ರದೇಶದಲ್ಲಿ ಉಚಿತ ನೇತ್ರ ಚಿಕಿತ್ಸೆ ಮಾಡಿದ ವೈದ್ಯರಿಗೆ ಸರ್ಕಾರ ಯಾವ ತರಹದ ಅನುದಾನ ಕೊಡುತ್ತಿದೆ?

ಇ) ಹಾಗಿಲ್ಲದಿದ್ದಲ್ಲಿ ಅನುದಾನ ಕೊಡುವ ಯೋಜನೆ ಸರ್ಕಾರಕ್ಕೆ ಇದೆಯೋ?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಜಿಲ್ಲಾವಾರು ನೇತ್ರ ಚಿಕಿತ್ಸಾಲಯಗಳ ಮಾಹಿತಿಯನ್ನು ಲಗತ್ತಿಸಲಾಗಿದೆ.

ಆ) ಗ್ರಾಮೀಣ ಪ್ರದೇಶದಲ್ಲಿ ಉಚಿತ ನೇತ್ರ ಚಿಕಿತ್ಸೆ ಮಾಡುವ ಸರ್ಕಾರಿ ವೈದ್ಯರಿಗೆ ಸರ್ಕಾರವು ಯಾವುದೇ ತರಹದ ಅನುದಾನವನ್ನು ನೀಡುತ್ತಿಲ್ಲ.

ಇ) .ಇಲ್ಲ.

DETAILS OF INSTITUTIONS UNDER NATIONAL PROGRAM FOR CONTROL OF BLINDNESS IN KARNATAKA STATE.

Sl. No.	Name of the District	Name of the Institutions in dentified under NPCB R.T.O.	MC	D.H.	G.H.	DMU	.E.B.	P.H.O.
1	2	3	4	5	6	7	8	9
1.	Bangalore (Urban)	1	-	-	1	1	1	14
2.	Bangalore (Rural)	-	-	-	1	1	-	20
3.	Chitradurga	-	1	1	-	2	-	22
4.	Tumkur	-	-	1	-	2	-	22
5.	Shimoga	-	-	1	-	1	-	17
6.	Kolar	-	-	1	1	1	-	24
7.	Belgaum	-	1	1	-	2	1	32
8.	Bijapur	-	-	1	-	2	-	28
9.	Dharwad	-	1	1	1	2	-	29
10.	Uttara Kannada	-	-	1	-	1	-	10
11.	Bellary	-	1	1	1	2	-	20
12.	Bidar	-	-	1	-	1	-	16
13.	Gulbarga	-	-	1	-	2	-	27
14.	Raichur	-	-	1	-	2	-	21

1	2	3	4	5	6	7	8	9
15.	Chickamagalaur	-	-	1	-	1	-	14
16.	Kodagu	-	-	1	0	1	-	5
17.	Hassan	-	-	1	1	1	-	19
18.	Dakshina Kannada	-	-	1	1	1	-	22
19.	Mandya	-	-	1	-	1	-	19
20.	Mysore	-	1	-	-	2	1	26
	Total	**1**	**5**	**17**	**7**	**29**	**3**	**416**

ಬಳ್ಳಾರಿ ಜಿಲ್ಲೆಯಲ್ಲಿ ಪದವಿ ಪೂರ್ವ ಕಾಲೇಜುಗಳ ಸ್ಥಾಪನೆ.

1537 - ಶ್ರೀ ಅಲ್ಲಂದ ವೀರಭದ್ರಪ್ಪ (ಕುರುಗೋಡು) : ಮಾನ್ಯ ಪ್ರಾಥಮಿಕ ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು? ತಾಲ್ಲೂಕುವಾರು ವಿವರ ನೀಡುವುದು?

ಆ) 1998-99ರಲ್ಲಿ ಹೊಸದಾಗಿ ಬಳ್ಳಾರಿ ಜಿಲ್ಲೆಯಲ್ಲಿ ಎಲ್ಲೆಲ್ಲಿ ಸರ್ಕಾರಿ ಹಾಗೂ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಅನುಮತಿ ನೀಡಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

ಅ) ಸರ್ಕಾರಿ ಕಿರಿಯ ಕಾಲೇಜುಗಳು 23

ಖಾಸಗಿ ಕಿರಿಯ ಕಾಲೇಜುಗಳು 22

ಪಿ.ಯು.ಸಿ.ವಿಭಾಗ ಇರುವ ಪ್ರಥಮ ದರ್ಜೆ ಕಾಲೇಜುಗಳು 05

50.

(ತಾಲ್ಲೂಕುವಾರು ಪಟ್ಟಿ ಲಗತ್ತಿಸಿದೆ).

ಆ) ಹಾಲಿ ಇರುವ ಸರ್ಕಾರಿ ಹಾಗೂ ಖಾಸಗಿ ಕಿರಿಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ ಇರುವುದರಿಂದ, ಹೊಸದಾಗಿ ಕಿರಿಯ ಕಾಲೇಜುಗಳ ಮಂಜೂರಾತಿ ಪರಿಗಣಿಸಲಾಗುವುದಿಲ್ಲ.